**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :5479/2023**
**ಚಾಸಾ - 02 / ಪ್ರಾಸಾ - 02**

| | |
|---|---|
| ಹೆಸರು | ಶ್ರೀನಿವಾಸ್ |
| ತಂದೆಯ ಹೆಸರು | ಲೇಟ್ ಗಂಗಯ್ಯ |
| ವಯಸ್ಸು | **65** |
| ಉದ್ಯೋಗ | ನಿವೃತ್ತ ಸರ್ಕಾರಿ ನೌಕರ |
| ವಿಳಾಸ | ಬಕ್ಕರಹಳ್ಳಿ |

**ದಿನಾಂಕಃ 19-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ನೋಟೀಸನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ನೋಟೀಸನ್ನು ನಿಪಿ-8 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಅಪಘಾತದ ವಿಷಯಕ್ಕೆ ಸಂಬಂಧಿಸಿದಂತೆ ನಾನು ನಿಪಿ-2 ಕ್ಕೆ ನನ್ನ ಸಹಿಯನ್ನು ನನ್ನ ಮನೆಯ ಹತ್ತಿರ ಹಾಕಿರುತ್ತೇನೆ. ನನ್ನನು ಹೊರತು ಪಡಿಸಿ ಬೇರೆ ಯಾರು ನಿಪಿ-2 ಕ್ಕೆ ಸಹಿಯನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸುಮಾರು 20 ದಿನಗಳ ನಂತರ ನಾನು ತಾವರೆಕೆರೆಯಿಂದ ಬರುವಾಗ ಪೋಲೀಸರು ನನ್ನನ್ನು ಕರೆದು ಜಾಗವನ್ನು ತೋರಿಸಲು ಹೇಳಿದರು ಆಗ ನಾನು ಮತ್ತು ಪ್ರಾಸಾ-1 ರವರು ಜಾಗವನು ತೋರಿಸಿದೆವು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ**

**ಮಹಿತಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿಃ 08-06-2023 ರಂದು ಪೋಲೀಸರು ನಿಮಗೆ ಪಂಚನಾಮೆಗೆ ಸಹಕರಿಸುವಂತೆ ಹೇಳಿ ನಿಪಿ-8 ರಂತೆ ನೋಟೀಸನ್ನು ನೀಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಿಃ 08-06-2023 ರಂದು ಪೋಲೀಸರು ಬೆಳಿಗ್ಗೆ 7.00 ರಿಂದ 8.00 ಗಂಟೆಯ ಸಮಯದಲ್ಲಿ ನಿಪಿ-2 ರಂತೆ ಅಪಘಾತ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಆ ದಿನ ಪೋಲೀಸರು ಬಂದಿರುವುದಿಲ್ಲ ಎನ್ನುತ್ತಾರೆ. ನಿಮ್ಮ ಜೊತೆ ನಿಪಿ-2 ಕ್ಕೆ ಪ್ರಾಸಾ-1 ಮತ್ತು ಚಾಸಾ-3 ರವರು ಸಹಿಯನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು 20 ದಿನಗಳ ನಂತರ ಪೋಲೀಸರು ಬಂದಾಗ ನಮ್ಮಿಂದ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಪೋಟೋವನ್ನು ತೆಗೆದಿರುತ್ತಾರೆ ಮತ್ತು ಸದರಿ ಪೋಟೋದಲ್ಲಿ ನೀವು ಇದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಕಚ್ಚಾ ನಕ್ಷೆಯನ್ನು ತಯಾರು ಮಾಡಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡಿದ ನಂತರ ಪೋಲೀಸರು ನಿಪಿ-2 ರಲ್ಲಿ ಇರುವ ವಿಷಯವನ್ನು ಲ್ಯಾಪ್ ಟಾಪ್ ಗೆ ಪ್ರಿಂಟರ್ ನ್ನು ಅಳವಡಿಸಿ ಅದರ ಮುಖಾಂತರ ಪ್ರಿಂಟ್ ನ್ನು ತೆಗೆದು ನಿಮಗೆ ಓದಿ ತಿಳಿಸಿ ನಿಮ್ಮಿಂದ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ತನ್ನ ಮನೆಯ ಹತ್ತಿರ ಸಹಿಯನ್ನು ಪಡೆದುಕೊಂಡರು ಎನ್ನುತ್ತಾರೆ. ನಿಮ್ಮ ಮತ್ತು ಪ್ರಾಸಾ-1 ರವರ ಮನೆ ಅಕ್ಕಪಕ್ಕದಲ್ಲಿ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ.ಎಂ.ಎಂ, ವಕೀಲರಿಂದಃ-**

ನನಗೆ ನಿಪಿ-2 ರಲ್ಲಿ ಇರುವ ವಿಷಯ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ನಿಪಿ-2 ಕ್ಕೆ ನೀವು ಅಪಘಾತ ನಡೆದ ಸ್ಥಳದಲ್ಲಿ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.  ಪಂಚನಾಮೆಯನ್ನು ಮಾಡಿದ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ . ಸಾಕ್ಷಿಯು ಮುಂದುವರಿದು ತಾನು ಪಂಚನಾಮೆಯನ್ನು ಮಾಡುವಾಗ ಇರಲಿಲ್ಲ ಎಂದು ನುಡಿದಿರುತ್ತಾರೆ. ನನ್ನ ಜೊತೆ ನಿಪಿ-2 ಕ್ಕೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ.  ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**